"ಅದೂ... ಸರ್... ಎರಡು ದಿನಗಳಿಂದ ಐಟಿ ನೋಟಿಸ್ ವಿಚಾರಣೆಯ ಓಡಾಟವೇ ಆಗಿದೆ. ಹಾಗಾಗಿ ಪೇಮೆಂಟ್ ಮಾಡಲಾಗಲಿಲ್ಲ..."

ಅವನ ಮಾತಿನ್ನೂ ಪೀಠಿಕೆಯಲ್ಲೇ ಇತ್ತು, ಆಗಲೇ ಶರ್ಮಾ ಮತ್ತೊಮ್ಮೆ ಗುಡುಗಿದ:

"ಎರಡು ದಿನಗಳಿಂದ ಊಟ ಮಾಡಿದ್ದೀರ ತಾನೇ?"

"ಇಲ್ಲ" ಎನ್ನಬೇಕೆಂದುಕೊಂಡ ರಾಜೀವ್. ಹಿಂದಿನ ದಿನ ಅಸೆಸ್ಮೆಂಟ್ ಮುಗಿಸಿ, ಅವರು ಹೇಳಿದ ಫೈಲ್‌ಗಳ ನಕಲು ತಯಾರಿಸಿ ಸಬ್ಮಿಟ್ ಮಾಡಿ ಹೊರಟವನಿಗೆ ನೇರವಾದ ಬಸ್ಸೇ ಸಿಕ್ಕಿರಲಿಲ್ಲ. ತಡವಾಗಿ ಮನೆ ತಲುಪಿದ ಸುಸ್ತಿನಲ್ಲಿ ಅಡುಗೆ ಮಾಡಿಕೊಳ್ಳುವ ಉತ್ಸಾಹವಿಲ್ಲದೇ ಉಪವಾಸ ಮಲಗಿಕೊಂಡು, ನಡುರಾತ್ರಿಗೆ ಹಸಿವಿನಿಂದ ಎಚ್ಚರವಾಗಿ, ತಿನ್ನಲು ಏನೂ ಸಿಕ್ಕದೆ ಕೊನೆಗೆ ಬರಿಯ ನೀರನ್ನಷ್ಟೇ ಕುಡಿದು ಮಲಗಿದ ವಿಷಯವನ್ನು ಹೇಳಿಬಿಡಬೇಕೆನಿಸಿತಾದರೂ ಹೇಳದೆ ಸುಮ್ಮನಾದ.

"ಇನ್ನೊಂದು ಸಲ ಯಾವುದೇ ವೆಂಡರ್‌ನಿಂದ ಪೇಮೆಂಟ್ ಆಗಿಲ್ಲಾಂತ ಕಂಪ್ಲೇಂಟ್ ಬಂದರೆ..."

ರಾಜೀವ ಕ್ಯಾಬಿನ್‌ನಿಂದ ಹೊರಗೆ ಬಂದ. ಅಲ್ಲಿ ಇಷ್ಟು ಹೊತ್ತು ತನ್ನ ಮೇಲಾದ ಸಹಸ್ರನಾಮಾರ್ಚನೆಯನ್ನು ಕೇಳಿಸಿಕೊಂಡಿದ್ದ ಮುಖಗಳೆಲ್ಲ ಕುಹುಕ ನಗೆಯನ್ನು ಮುಚ್ಚಿಟ್ಟುಕೊಂಡು ಕುಳಿತಿರುವಂತೆ ಭಾಸವಾಯಿತು. ಈ ಬಿಲ್ಲುಗಳನ್ನು ತೆಗೆದು ಆಚೆ ಕುಳಿತಿರುವ ಕಾವ್ಯಾಳ ತಲೆಯ ಮೇಲೆ ಕುಕ್ಕಿ 'ನನ್ನ ಸುಖಗಳನ್ನ ಆಡಿಕೊಳ್ತೀಯಲ್ಲಾ, ಈ ಕಷ್ಟಗಳ ಬಗ್ಗೆಯೂ ಸ್ವಲ್ಪ ಮಾತಾಡು' ಎಂದು ಅಬ್ಬರಿಸಬೇಕೆನ್ನಿಸಿತು. ಆದಷ್ಟು ಬೇಗ ತನ್ನ ಬಹುದಿನಗಳ ಕನಸಿನಂತೆ

